

# ಬಫೆಟ್‌ಗೂ ಚಿಂತೆ

ವಾರೆನ್ ಬಫೆಟ್, ಜಗತ್ತು ಈವರೆಗೆ ಕಂಡ ಅತ್ಯಂತ ಯಶಸ್ವೀ ಹೂಡಿಕೆದಾರ. ಬರ್ಕ್‌ಶೈರ್ ಹಾಥ್‌ವೇ ಎಂಬ ದೈತ್ಯ ಅಮೆರಿಕನ್ ಕಂಪನಿಯ ಈ ದಿಗ್ಗಜ ಉದ್ಯಮಿ ಕೂಡಾ ಕೊರೊನಾ ವೈರಸ್ ದಾಳಿಗೆ ಕಂಗಾಲಾಗಿದ್ದಾರೆ. ‘ನಾನು ಆರೋಗ್ಯವಂತನಾಗಿದ್ದೇನೆ, ಅದರಲ್ಲೇನೂ ಸಂಶಯವಿಲ್ಲ. ಆದರೆ ಜಾಗತಿಕ ಉದ್ಯಮ ಕ್ಷೇತ್ರದ ಅನಾರೋಗ್ಯ ಚಿಂತೆಗೆ ಕಾರಣವಾಗಿದೆ’ ಎಂದಿದ್ದಾರೆ 89ರ ಹರೆಯದ ಈ ಅಜ್ಜ. ಸಾವಿರಾರು ಜನರು ಸೇರುವ ಬರ್ಕ್‌ಶೈರ್ ಕಂಪನಿಯ ವಾರ್ಷಿಕ ಷೇರುದಾರರ ಸಭೆಯೂ ಈ ಸಲ ಇದೇ ಮೊದಲ ಬಾರಿಗೆ ಆನ್‌ಲೈನ್‌ನಲ್ಲಿ ನಡೆಯಿತು. ಅದಕ್ಕೂ ಕಾರಣ ಕೊರೊನಾ. ‘ಕೊರೊನಾ ಎನ್ನುವುದು ಜಾಗತಿಕ ದುರಂತ. ನನ್ನ 89ನೆಯ ವಯಸ್ಸಿನಲ್ಲಿ ಇಂತಹದ್ದೊಂದು ಪರಿಸ್ಥಿತಿ ಎದುರಾಗುತ್ತದೆ ಅಂದುಕೊಂಡಿರಲಿಲ್ಲ’ ಎನ್ನುವುದು ಬಫೆಟ್ ಉವಾಚ.

2020ನೇ ಸಾಲಿನ ಮೊದಲ ತ್ರೈಮಾಸಿಕದಲ್ಲಿ ಬರ್ಕ್‌ಶೈರ್ ಹಾಥ್‌ವೇ ಅನುಭವಿಸಿದ ನಷ್ಟ ಸುಮಾರು 50 ಶತಕೋಟಿ ಡಾಲರ್. ಹೂಡಿಕೆಯೇ ಮುಖ್ಯ ಬಿಸಿನೆಸ್ ಆಗಿರುವುದರಿಂದ ಕೊರೊನಾ ಆರ್ಥಿಕ ಸಂಕಷ್ಟದಲ್ಲಿ ಇದು ಸಹಜವೇ. ಮುಖ್ಯವಾಗಿ ಏರ್‌ಲೈನ್ಸ್ ಬಿಸಿನೆಸ್‌ನಲ್ಲಿ ಹೂಡಿರುವ ಹಣ ಕೈಕೊಟ್ಟಿದೆ. ಅಮೆರಿಕನ್, ಡೆಲ್ಟಾ, ಸೌತ್‌ವೆಸ್ಟ್ ಮತ್ತು ಯುನೈಟೆಡ್ ಈ ನಾಲ್ಕೂ ವಿಮಾನ ಕಂಪನಿಗಳು ಕಳೆದ ಐದು ತಿಂಗಳಿಂದ ಅನುಭವಿಸುತ್ತಿರುವ ನಷ್ಟ ಬರ್ಕ್‌ಶೈರ್‌ನ ಲಾಭವನ್ನು ತಿಂದುಹಾಕಿದೆ. ಅಮೆರಿಕನ್ ಎಕ್ಸ್‌ಪ್ರೆಸ್, ಬ್ಯಾಂಕ್ ಆಫ್ ಅಮೆರಿಕ ಮತ್ತು ವೆಲ್ಸ್ ಫಾರ್ಗೊ ದೈತ್ಯ ಕಂಪನಿಗಳ ನಷ್ಟವೂ ಬಫೆಟ್ ಚಿಂತೆಯನ್ನು ಹೆಚ್ಚಿಸಿದೆ.

ಹಾಗೆಂದು ಬರ್ಕ್‌ಶೈರ್ ಹಾಥ್‌ವೇ ಸುಲಭವಾಗಿ ಬಗ್ಗುವ ಕಂಪನಿಯಲ್ಲ. ಬಫೆಟ್ ಕೂಡಾ ಸುಲಭವಾಗಿ ಸೋಲೊಪ್ಪಿಕೊಳ್ಳುವ ಉದ್ಯಮಿಯೂ ಅಲ್ಲ. ಏಕೆಂದರೆ 1965ರಿಂದಲೂ ಸರಾಸರಿ ಶೇಕಡಾ 19ರಷ್ಟು ವೃದ್ಧಿ ದರ ತೋರಿಸುತ್ತಿದೆ ಈತನ ಕಂಪನಿ. ಬರ್ಕ್‌ಶೈರ್ ಪೂರ್ಣ ಸ್ವಾಮ್ಯತ್ವ ಹೊಂದಿರುವ ಜೀಕೊ, ಡ್ಯುರಾಸೆಲ್, ಡೈರಿ ಕ್ವೀನ್, ಬಿಎನ್‌ಎಸ್‌ಎಫ್, ಲೂಬ್ರಿಜೋಲ್, ಹೆಲ್ಜ್‌ಬರ್ಗ್ ಡೈಮಂಡ್ಸ್, ಲಾಂಗ್ ಅಂಡ್ ಫಾಸ್ಟರ್, ಪ್ಯಾಂಪರ್ಡ್ ಶೆಫ್ ಮುಂತಾದ ಕಂಪನಿಗಳು ಇವತ್ತಿಗೂ ಭರ್ಜರಿ ಹಾಲು ಕರೆಯುವ ಹಸುಗಳೇ. ಅದೂ ಅಲ್ಲದೆ ಈಗಲೂ, 137.3 ಶತಕೋಟಿ ಡಾಲರ್ ನಗದು ಹೊಂದಿರುವ ದೈತ್ಯ ಕಂಪನಿ ಬಫೆಟ್‌ರದ್ದು. ‘ಕಳೆದ ನಾಲ್ಕು ವರ್ಷಗಳಿಂದ ಖರೀದಿಸಲು ಒಂದು ಒಳ್ಳೆಯ ಕಂಪನಿ ಕಾಣಿಸುತ್ತಿಲ್ಲ. ಹಾಗಾಗಿ ನಗದು ಹಾಗೆಯೇ ಉಳಿದಿದೆ’ ಎಂದು 2019ರ ಕೊನೆಯಲ್ಲಿ ಈತ ಹೇಳಿದ್ದುಂಟು. 4 ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ, ವಿಶ್ವದ ನಾಲ್ಕನೇ ಅತಿದೊಡ್ಡ ಸಾರ್ವಜನಿಕ ಕಂಪನಿಯಿದು. 1839ರಲ್ಲಿ ಸ್ಥಾಪನೆಯಾದ ಕಂಪನಿಯ ಹೆಸರು ವ್ಯಾಲಿ ಫಾಲ್ಸ್ ಕಂಪನಿ ಎಂದಿತ್ತು. 1955ರಲ್ಲಿ ಬರ್ಕ್‌ಶೈರ್ ಹಾಥ್‌ವೇ ಎಂದಾಯಿತು. ಕಂಪನಿಯ ಎ ದರ್ಜೆಯ ಒಂದು ಷೇರಿನ ಮೌಲ್ಯ 3 ಲಕ್ಷ ಡಾಲರ್ ದಾಟಿದೆ. ಅದಕ್ಕೂ ಕಾರಣವಿದೆ. ಬೇರೆ ಕಂಪನಿಗಳಂತೆ ಬಫೆಟ್ ತಮ್ಮ ಕಂಪನಿಯ ಷೇರುಗಳನ್ನು ಯಾವತ್ತೂ ವಿಭಜಿಸಿಲ್ಲ.

ಜಾಗತಿಕ ಆರ್ಥಿಕತೆಯಲ್ಲಿ ಅಮೆರಿಕದ ಸ್ಥಾನಮಾನದ ಬಗ್ಗೆ ಆತಂಕಗಳು ಉಂಟಾಗಿರುವುದು ಈಚಿನ ಕೊರೊನೋತ್ತರ ಕಾಲದ ಮುಖ್ಯ ಬೆಳವಣಿಗೆ. ಚೀನಾ ಜಾಗತಿಕ ಆರ್ಥಿಕತೆಯ ಮೇಲೆ ತನ್ನ ಹಿಡಿತವನ್ನು ಬಿಗಿಗೊಳಿಸುತ್ತಿರುವುದು ಎದ್ದು ಕಾಣುತ್ತಿದೆ. ಆದರೆ ವಾರೆನ್ ಬಫೆಟ್ ಪ್ರಕಾರ, ‘ಅಮೆರಿಕದ ಪಾರಮ್ಯ ಕುಂದುವುದಿಲ್ಲ, ಅದು ಮತ್ತೆ ಎದ್ದು ನಿಲ್ಲಲಿದೆ.’ ಬರ್ಕ್‌ಶೈರ್ ಹಾಥ್‌ವೇನಲ್ಲಿ ಬಫೆಟ್‌ರ ಬಿಸಿನೆಸ್ ಪಾರ್ಟ್‌ನರ್ ಆಗಿರುವಾತ ಚಾರ್ಲೀ ಮುಂಗರ್. ಈತನಿಗೆ 96 ವರ್ಷ ವಯಸ್ಸು. ಕಳೆದ 60 ವರ್ಷಗಳಿಂದ ಇವರ ಪಾರ್ಟ್‌ನರ್‌ಷಿಪ್ ಮುಂದುವರಿದಿದೆ.

ಆಗಸ್ಟ್ 30ಕ್ಕೆ ಬಫೆಟ್ ಅವರಿಗೂ 90 ವರ್ಷ ತುಂಬಲಿದೆ. 7100 ಕೋಟಿ ಅಮೆರಿಕನ್ ಡಾಲರ್ ನಿವ್ವಳ ಆಸ್ತಿ ಹೊಂದಿರುವ ವಾರೆನ್ ಬಫೆಟ್ ಈಗಲೂ ಸರಳ ಬದುಕಿಗೆ ಹೆಸರುವಾಸಿ. 11ರ ಎಳವೆಯಲ್ಲಿ ಮೊದಲ ಷೇರು ಖರೀದಿಸಿದ ಬಫೆಟ್, 16ರ ಹರೆಯದಲ್ಲಿ ಆದಾಯ ತೆರಿಗೆ ಕಟ್ಟಿದ್ದರು. ಪದವಿ ಮುಗಿಸುವ ಹೊತ್ತಿಗೆ ಒಮಾಹಾದಲ್ಲಿ 40 ಎಕರೆ ಜಾಗ ಖರೀದಿಸಿದ್ದರು. ‘30ರ ಹರೆಯದಲ್ಲಿ ನಾನು ಕೋಟ್ಯಧೀಶ್ವರ ಆಗದಿದ್ದರೆ ಒಮಾಹಾದ ಅತ್ಯಂತ ಎತ್ತರದ ಕಟ್ಟಡದಿಂದ ಜಿಗಿದು ಸಾಯುವೆ’ ಎಂದು ಈ ಹಂತದಲ್ಲಿ ಹೇಳಿದ್ದ ಬಫೆಟ್, ಅದರಂತೆಯೇ ಷೇರು ಉದ್ಯಮದಲ್ಲಿ ಎತ್ತರಕ್ಕೆ ಏರಿದರು. ‘ಆದರೆ ಈಗ ಇರುವ ಸಂಪತ್ತಿನಲ್ಲಿ ಶೇಕಡಾ 99ರಷ್ಟು ಪಾಲು ಬಂದಿದ್ದು ಅವರಿಗೆ 50 ವರ್ಷ ದಾಟಿದ ಬಳಿಕ’ ಎನ್ನುವುದು ಆಪ್ತರ ಹೇಳಿಕೆ.

2020ರ ತ್ರೈಮಾಸಿಕದ ನಷ್ಟ ಏನೇ ಇದ್ದರೂ ವಾರೆನ್ ಬಫೆಟ್ ಮತ್ತೆ ಫೀನಿಕ್ಸ್‌ನಂತೆ ಹೂಡಿಕೆಯ ಕ್ಷೇತ್ರದಲ್ಲಿ ಮೇಲೆದ್ದು ಬರುವುದು ಖಂಡಿತ ಎನ್ನುವುದು ಅಭಿಮಾನಿಗಳ ಹೇಳಿಕೆ. ‘ನಿಜ. ಆದರೆ ಅದಕ್ಕೆ ಎಷ್ಟು ಸಮಯ ಹಿಡಿಯಬಹುದು ಎನ್ನುವುದು ನನಗೂ ಗೊತ್ತಿಲ್ಲ’ ಎಂದಿದ್ದಾರೆ ಬಫೆಟ್.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65